# ನಳಿನಿಯ ಮಡಿಯ ಗೀಳು ಮತ್ತು ಗೋಳು

ಎನ್. ಗೋಪೀನಾಥ್

**ಶ್ರೀಮಾತೆಯವರ ವ್ಯಕ್ತಿವೈಶಿಷ್ಟ್ಯವನ್ನು ಪ್ರತಿಬಿಂಬಿಸುವ ಕೆಲವು ಘಟನೆಗಳನ್ನು ಸಂಗ್ರಹಿಸಿರುವ ಶ್ರೀ ಗೋಪೀನಾಥ ಅವರು ಶಿವಮೊಗ್ಗ ನಿವಾಸಿಗಳು.**

ಶ್ರೀಮಾತೆ ಶಾರದಾದೇವಿಯವರ ತಮ್ಮನ ಮಗಳಾದ ನಳಿನಿಯು ಮದುವೆಯಾಗಿದ್ದರೂ ನಾನಾ ಕಾರಣಗಳಿಂದಾಗಿ ಶ್ರೀಮಾತೆಯವರ ಜೊತೆಯಲ್ಲಿಯೇ ಇರುತ್ತಿದ್ದಳು. ಅವರಂತಹ ದೈವೀ ವ್ಯಕ್ತಿಯೊಂದಿಗೆ ನಿರಂತರವಾಗಿ ಇದ್ದರೂ ಆಧ್ಯಾತ್ಮಿಕ ಆದರ್ಶಕ್ಕೆ ಸ್ವಲ್ಪವೂ ಸ್ಪಂದಿಸಲಿಲ್ಲ. ನಳಿನಿ ಹಾಗೂ ಶ್ರೀಮಾತೆಯವರ ಇತರ ತಮ್ಮಂದಿರ ಮಕ್ಕಳಾದ ಮಾಕು, ರಾಧು ಇವರೆಲ್ಲ ತಮ್ಮ ವಿಚಿತ್ರ ವರ್ತನೆಗಳಿಂದ ಅವರಿಗೆ ಸದಾ ತೊಂದರೆ ಕೊಡುತ್ತ, ಯಾವಾಗಲೂ ಮೇಲಕ್ಕೇರುತ್ತಿದ್ದ ಅವರ ಮನಸ್ಸನ್ನು ಬಲವಂತವಾಗಿ ಪ್ರಪಂಚದ ಕಡೆ ಹರಿಸುವಂತೆ ಮಾಡುವುದರಲ್ಲಿ ಸಫಲರಾಗಿದ್ದರು! ಅಷ್ಟಕ್ಕೋಸ್ಕರ ನಾವು ಅವರನ್ನು ನೆನೆಯಬೇಕು!

ನಳಿನಿಗೆ ಮಡಿಯ ಹುಚ್ಚು ಬಹಳ. ಯಾವಾಗಲೂ, ಅಪವಿತ್ರವಾದದ್ದು ತನ್ನ ಪವಿತ್ರ(!) ಶರೀರಕ್ಕೆ ಎಲ್ಲಿ ಸ್ಪರ್ಶವಾಗುತ್ತದೆಯೋ ಎಂದು ಭೀತಳಾಗಿರುತ್ತಿದ್ದಳು. ಆದರೆ ಶ್ರೀಮಾತೆಯವರಾದರೋ ಈ ಬಾಹ್ಯಾಚಾರದ "ಮಡಿ"ಯನ್ನು ಮನಸ್ಸಿಗೆ ಹಚ್ಚಿಕೊಳ್ಳುವವರೇ ಅಲ್ಲ. (ಹಿಂದೆ, ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಸ್ವಲ್ಪಕಾಲ ಕಾಮಾರಪುಕುರದಲ್ಲಿದ್ದಾಗ, ಒಂದು ದಿನ ಒಣಗಿದ ಮಲವನ್ನು ತುಳಿದಾಗ, "ಗೋವಿಂದ" ನಾಮವನ್ನು ಉಚ್ಚರಿಸಿ, ತಕ್ಷಣವೇ ಮನಸ್ಸು ಪವಿತ್ರವಾದಂತೆ ಭಾವಿಸಿದವರು). ಆಗಾಗ ನಳಿನಿ ಹೇಳುತ್ತಿದ್ದಳು: "ಅತ್ತಿಗೆ (ಶ್ರೀಮಾತೆ) ಊಟಮಾಡಿ ಬಿಸಾಡಿದ ಎಂಜಲೆಲೆಯನ್ನು ತುಳಿದರೂ ಸಹ ಮನಸ್ಸಿಗೆ ಹಚ್ಚಿಕೊಳ್ಳುವುದೇ ಇಲ್ಲ. ಯಾವಾಗ 'ಕೈಗೆ ಸ್ವಲ್ಪ ಗಂಗಾ ಜಲವನ್ನು ಹಾಕು' ಎಂದು ಹೇಳುತ್ತಾರೋ ಆಗ ನನಗೆ ಖಾತ್ರಿಯಾಗುತ್ತದೆ—ಎಂಥದೋ ಹೊಲಸನ್ನು ತುಳಿದಿದ್ದಾರೆ ಎಂದು!" ನಳಿನಿಯ ಈ ತರಹದ ಕಟುನುಡಿಗಳನ್ನು ಶ್ರೀಮಾತೆಯವರು ಸಹಿಸಿಕೊಳ್ಳಬೇಕಾಗುತ್ತಿತ್ತು. ಕೆಲವು ಸಾರಿ ಈ ಮಡಿಯ ಗೀಳು ತಾರಕಕ್ಕೇರಿ ಮನೆಯಲ್ಲಿದ್ದವರೆಲ್ಲರಿಗೂ ಮುಜುಗರ ಉಂಟಾಗುತ್ತಿತ್ತು. ಆಗ ಅವರೆನ್ನುತ್ತಿದ್ದರು: "ಈ ದಿನ ಶ್ರೀಮಾತೆಯವರಿಂದ ವಿಶೇಷವಾದದ್ದನ್ನೇನೊ ಕೇಳಲಿದ್ದಾಳೆ; ಅದಕ್ಕೇ ಈ ಮಡಿಯ ನಾಟಕ."

ಚಳಿಗಾಲದ ಒಂದು ಸಂಜೆ ಕತ್ತಲಾಗುತ್ತಿತ್ತು. ನಳಿನಿ ಶ್ರೀಮಾತೆಯವರಲ್ಲಿಗೆ ಬಂದು ಬಿಕ್ಕಳಿಸುತ್ತಾ ತಾನು ಹೇಸಿಗೆಯನ್ನು ತುಳಿದೆನೆಂದು ತಿಳಿಸಿದಳು. ಆ ಚಳಿಗಾಲದ ರಾತ್ರಿಯಲ್ಲಿ ಸ್ನಾನ ಮಾಡುವುದಂತೂ ಅಸಾಧ್ಯ. ಆದ್ದರಿಂದ ಅವಳ ಮಡಿಗೀಳೇ ಅವಳನ್ನು ಊಟ ಮಾಡುವುದಕ್ಕೂ, ಮನೆಯೊಳಗೆ ಬಂದು ನಿದ್ರೆಮಾಡುವುದಕ್ಕೂ ಅಡ್ಡಿಪಡಿಸುತ್ತಿದೆ. ಪರಿಣಾಮವಾಗಿ ಉಳಿದ ಏಕೈಕ ಮಾರ್ಗವೆಂದರೆ ಆ ಚಳಿಯ ರಾತ್ರಿಯನ್ನೆಲ್ಲ ಮನೆಯ ಹೊರಗೇ ಕುಳಿತು ಕಾಲ ಕಳೆಯುವುದು! ಶ್ರೀಮಾತೆಯವರು ಅವಳನ್ನು ವಿವಿಧ ಉಪಾಯಗಳಿಂದ ಸಮಾಧಾನ ಮಾಡಲೆತ್ನಿಸಿದರು; ಮೈಮೇಲೆ ಗಂಗಾಜಲವನ್ನು ಸಿಂಪಡಿಸಿಕೊಂಡರೆ ಸಾಕೆಂದರು; ಅಥವಾ ಬಟ್ಟೆ ಬದಲಾಯಿಸಿ, ಕೈಕಾಲು ತೊಳೆದುಕೊಂಡರೆ ಸಾಕೆಂದರು. ಆದರೆ ಈ ಸರಳ ಉಪಾಯಗಳೆಲ್ಲ 'ಮಹಾ ಮಡಿವಂತೆ' ಯಾದ ನಳಿನಿಗೆ ಪಥ್ಯವಾದೀತೆ? ಊಹ್ಞು! ಪೂರ್ತಿ ಸ್ನಾನ ಮಾಡದೆ ಶುಚಿಯಾಗುವಂತೆಯೇ ಇಲ್ಲ. ದುಃಖ ಉಮ್ಮಳಿಸಿ ಬಂದು ಶ್ರೀಮಾತೆಯವರ ಕೋಣೆಯ ಎದುರಿನ ಕಟ್ಟೆಯ ಮೇಲೆ —ಈ ಕಷ್ಟಗಳಿಗೆಲ್ಲ ಶ್ರೀಮಾತೆಯವರೆ ಕಾರಣವೆಂಬಂತೆ—ಕುಳಿತಳು!

ರಾತ್ರಿ ಮುಂದುವರಿಯಿತು. ಆದರೆ ಅವಳು ಏಳಲಿಲ್ಲ; ಹಾಗೆಯೇ ಕುಳಿತು ಕಣ್ಣೀರುಗರೆಯಲಾರಂಭಿಸಿದಳು. ಶ್ರೀಮಾತೆಯವರು ಒಳಗೆ ಬರುವಂತೆ ಕರೆದರು. ಇತರರೂ ವಿವೇಕ ಹೇಳಲು ಪ್ರಯತ್ನಿಸಿದರು. ಆದರೆ ಅವಳು ಯಾವುದನ್ನೂ ಕೇಳುವಂತಿರಲಿಲ್ಲ. ಆದ್ದರಿಂದ ಅವರೆಲ್ಲರೂ ಊಟಮಾಡಿ, ನಿದ್ರೆ ಮಾಡಲು ಹೋಗುವ ಮುನ್ನ, ಶ್ರೀಮಾತೆಯವರಿಗೆ ನಳಿನಿಯ ಬಗ್ಗೆ ಇನ್ನು ಕನಿಕರ ತೋರಬಾರದೆಂದು ಕೇಳಿಕೊಂಡರು. ಹೀಗಾದರೂ ಅವಳೊಂದು ಪಾಠ ಕಲಿಯಲೆಂದೂ, ಅದರಿಂದ ಅವಳಿಗೇ ಒಳ್ಳೆಯದಾಗುತ್ತದೆಯೆಂದೂ ಸಹ ತಿಳಿಸಿದರು. ಇತ್ತ ಎಲ್ಲರೂ ವಿಶ್ರಮಿಸಿಕೊಳ್ಳಲು ಹೋದುದರಿಂದ ತನ್ನನ್ನು ಕೇಳುವವರೇ ಇಲ್ಲವೆಂದೆನಿಸಿತು ನಳಿನಿಗೆ. ದುಃಖ ಇನ್ನೂ ಹೆಚ್ಚಿತು. ಶುರುವಾಯಿತು ಗೋಳಾಟ "ಅಯ್ಯೋ! ನನ್ನನ್ನು ವಿಚಾರಿಸುವವರೇ ಇಲ್ಲ. ನನ್ನ ಗಂಡನ ಮನೆಯಲ್ಲಿ ನನಗೆ ಸ್ವಾಗತವಿಲ್ಲ. ಆದ್ದರಿಂದ ತಂದೆಯ ಮನೆಗೆ ಬಂದೆ. (ತಾಯಿ ಸತ್ತಿದ್ದರಿಂದ) ತಂದೆ ಇನ್ನೊಂದು ಮದುವೆ ಮಾಡಿಕೊಂಡಿದ್ದಾನೆ. ಮನೆಯಲ್ಲಿ ಮಲತಾಯಿಯದೇ ಕಾರುಬಾರು! ಹಾಗಾಗಿ ನಾನು ಅಲ್ಲಿ ಹೇಗೆ ಇರಬಲ್ಲೆ? ನನ್ನನ್ನು ಪ್ರೀತಿಸುವ ಅತ್ತಿಗೆ(ಶ್ರೀಮಾತೆ) ಇದ್ದಾರೆ. ಅವರು ನನ್ನನ್ನು ತನ್ನವರೆಂದೇ ಭಾವಿಸಿ ಸಲಹುತ್ತಿದ್ದಾರೆ. ಆದರೆ ಇತರರಿಗೆ ನನ್ನ ಮೇಲೆ ಅಸೂಯೆ! ನನಗೆ ಇಲ್ಲೂ ಇರಲು ಅಸಾಧ್ಯವಾಗುತ್ತಿದೆ. ಹೇ ಭಗವಂತಾ! ನೀನೆಷ್ಟು ನಿಷ್ಕರುಣಿ! ನನ್ನ ಬಾಳು ಹೀಗೆ ಗೋಳಿನಲ್ಲಿಯೇ ಕಳೆಯಬೇಕೆ..." ಸ್ವಲ್ಪ ಹೊತ್ತು ಸುಮ್ಮನಿರುವಳು. ಮತ್ತೆ ಅದೇ ಪ್ರಲಾಪ!

ಮನೆಯಲ್ಲಿ ಎಲ್ಲರೂ ಮಲಗಿದ್ದಾರೆ. ಶ್ರೀಮಾತೆಯವರು ಈಗ ಎದ್ದು ಹಾಸಿಗೆಯಿಂದಲೇ ಹೇಳುತ್ತಾರೆ: "ಮಗೂ, ನನ್ನ

ಮಾತು ಕೇಳು. ನೀನೇಕೆ ವಿನಾ ಕಾರಣವಾಗಿ ನಿನ್ನನ್ನೇ ತೊಂದರೆಗೀಡು ಮಾಡಿಕೊಂಡಿರುವೆ? ಈ ಕತ್ತಲ ರಾತ್ರಿಯಲ್ಲಿ, ಚಳಿಯಲ್ಲಿ, ಹೊರಗೇಕೆ ಕುಳಿತಿರುವೆ? ಒಳಗೆ ಬಾ, ಊಟ ಮಾಡಿ ನಿದ್ದೆ ಮಾಡು." ಸ್ವಲ್ಪ ಹೊತ್ತಿನ ನಂತರ ಮತ್ತೆ ಹೇಳುತ್ತಾರೆ: "ಅಯ್ಯೋ! ನಳಿನಿ ಇನ್ನೂ ಚಿಕ್ಕವಳು. ಬುದ್ಧಿ ಸರಿಯಾಗಿ ಬೆಳೆದಿಲ್ಲ. ಆದ್ದರಿಂದಲೇ ಸಾಮಾನ್ಯ ವಿಷಯಗಳಿಗೆಲ್ಲ ಕ್ಷೋಭೆಗೊಂಡು ಇತರರಿಗೆಲ್ಲ ತೊಂದರೆ ಕೊಡುತ್ತಾಳೆ."

ಇನ್ನೂ ಗಾಢವಾಗಿ ನಿದ್ರೆ ಬರದಿದ್ದ ಶ್ರೀಮಾತೆಯವರ "ಪುತ್ರ" ನೊಬ್ಬ ಇದೆಲ್ಲವನ್ನು ಕೇಳಿಸಿಕೊಂಡು ಭಾವಿಸಿದ : "ನಾವು ಇನ್ನೊಬ್ಬರ ಬಗ್ಗೆ ಕೋಪಗೊಂಡಾಗ ಸಾಮಾನ್ಯವಾಗಿ ಇನ್ನೊಬ್ಬ ವ್ಯಕ್ತಿ ಬೇಕೆಂತಲೇ ನಮ್ಮ ವಿರುದ್ಧವಾಗಿ ವರ್ತಿಸುತ್ತ ತೊಂದರೆ ಕೊಡುತ್ತಿದ್ದಾನೆ ಎಂದು ಭಾವಿಸುತ್ತೇವೆ. ಆದರೆ ಇಲ್ಲಿ! ಶ್ರೀಮಾತೆಯವರೇ ತದ್ವಿರುದ್ಧವಾಗಿ ವರ್ತಿಸುತ್ತಿರುವ ನಳಿನಿಯ ವರ್ತನೆಯಲ್ಲಿ ಸೂಕ್ತ ಕಾರಣ ಹುಡುಕುತ್ತಿದ್ದಾರೆ. ಆಕೆ (ನಳಿನಿ) ಬೇಕೆಂತಲೇ ಅಲ್ಲ—ತನ್ನ ಬುದ್ಧಿ ಬೆಳೆಯದ ಮನಸ್ಸಿನಿಂದಾಗಿ ವಿಚಿತ್ರವಾಗಿ ವರ್ತಿಸುತ್ತಿದ್ದಾಳೆ ಎಂಬುದನ್ನು ಎಷ್ಟು ಬೇಗ ಒಪ್ಪಿಕೊಂಡುಬಿಟ್ಟರು! ಶ್ರೀಮಾತೆಯವರ ದೃಷ್ಟಿಯಲ್ಲಿ ಅದು ಆಕೆಯ ತಪ್ಪಲ್ಲ—ಏಕೆಂದರೆ ವಯಸ್ಸಿನಲ್ಲಿ ಪ್ರೌಢಳಾದರೂ ಬುದ್ಧಿಮತ್ತೆಯಲ್ಲಿ ಅವಳಿನ್ನೂ ಬಾಲಕಿ. ಮಕ್ಕಳು ತಪ್ಪು ಮಾಡುತ್ತಾರೆಂದು ಯಾರಾದರೂ ದೂಷಿಸುತ್ತಾರೆಯೇ?"

ಈಗ ಶ್ರೀಮಾತೆಯವರು ನಳಿನಿ ಇದ್ದಲ್ಲಿಗೆ ಬಂದು, ತಮ್ಮ ಮೃದುನುಡಿಗಳಿಂದ ಸಮಾಧಾನಗೊಳಿಸುತ್ತಾರೆ. ನಳಿನಿಯೂ ಅದಕ್ಕೆ ಸ್ಪಂದಿಸುತ್ತಾಳೆ. ಅವಳ ದುಃಖ ಕಡಿಮೆಯಾಯಿತು; ಬಟ್ಟೆ ಬದಲಾಯಿಸಿ, ಊಟಮಾಡಿ, ನಿದ್ರೆ ಮಾಡುವುದಕ್ಕೆ ಹೋಗುತ್ತಾಳೆ. ಶ್ರೀಮಾತೆಯವರಿಗೂ ಸಂತೋಷವಾಯಿತು. ಈ ತರಹದ ಹಲವಾರು ಕ್ಲಿಷ್ಟ ಪ್ರಕರಣಗಳಲ್ಲಿ ಶ್ರೀಮಾತೆಯವರು ತಮ್ಮ ಅಪಾರವಾದ ತಾಳ್ಮೆ ಮತ್ತು ಕರುಣೆಗಳಿಂದ ಪರಿಸ್ಥಿತಿಯನ್ನು ತಿಳಿಗೊಳಿಸುತ್ತಿದ್ದರು. (*The Mother as I Saw Her*, ಸ್ವಾಮಿ ಶಾರದೇಶಾನಂದ, ರಾಮಕೃಷ್ಣ ಮಠ, ಚೆನ್ನೈ, ೧೯೮೭, ಎರಡನೆ ಮುದ್ರಣ, ಪುಟ. ೬೫-೬೭).

❊ ❊ ❊ ❊

ಬದನ್‌ಗಂಜ್ ಶಾಲೆಯಲ್ಲಿ ಏಳನೆ ತರಗತಿಯಲ್ಲಿ ಓದುತ್ತಿದ್ದ ರಾಮಮಯನೆಂಬ ಬಾಲಕ (ಮುಂದೆ ಸ್ವಾಮಿ ಗೌರೀಶ್ವರಾನಂದರು) ಜಯರಾಮಬಟಿಗೆ ಶನಿವಾರ ಶಾಲೆ ಮುಗಿಸಿಕೊಂಡು ಬಂದು, ಶನಿವಾರ, ಭಾನುವಾರ ಅಲ್ಲಿದ್ದು, ಶ್ರೀಮಾತೆಯವರ ಮನೆವಾರ್ತೆ ಕೆಲಸಗಳಲ್ಲಿ ಸಹಾಯಮಾಡುತ್ತಾ, ಸೋಮವಾರ ಬೆಳಗ್ಗೆ, ಬದನ್‌ಗಂಜ್ ಶಾಲೆಗೆ ವಾಪಸು ಹೋಗುತ್ತಿದ್ದ.

ಒಂದು ದಿನ ಬ್ರಹ್ಮಚಾರಿ ಜ್ಞಾನ್ ಅವರೊಂದಿಗೆ ಆತ, ಪುಣ್ಯಪುಕುರ ಕೆರೆಯ ಉತ್ತರಭಾಗದಲ್ಲಿ ಬಾಳೆಗಿಡಗಳನ್ನು ನೆಡುತ್ತಿದ್ದ. ಬೆಳಗ್ಗಿನಿಂದಲೇ ಅವರು ಕೆಲಸ ಮಾಡುತ್ತಿದ್ದರು. ಬಿಸಿಲು ಏರುತ್ತಲೇ ಶ್ರೀಮಾತೆಯವರು ಬಂದು, ಊಟಕ್ಕೆ ಕರೆದರು. "ಸ್ವಲ್ಪ ಹೊತ್ತು ಬಿಟ್ಟು ಬರುತ್ತೇವೆ" ಎಂದು ಇಬ್ಬರೂ ಉತ್ತರಿಸಿದರು. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆಯವರು ಮತ್ತೆ ಬಂದು ಹೇಳಿದರು, "ಊಟ ಮುಗಿಸಿಕೊಂಡು ಬಂದು ಕೆಲಸ ಮುಗಿಸಿ" ಎಂದು. ರಾಮಮಯನಿಗೆ ಹೋಗಬೇಕೆನಿಸಿತು. ಆದರೆ ಬ್ರಹ್ಮಚಾರಿ ಜ್ಞಾನ್ ಬಿಡಬೇಕಲ್ಲ! ಮೂರನೆ ಬಾರಿ ಬಂದ ಶ್ರೀಮಾತೆಯವರು ಅವನೊಬ್ಬನನ್ನೇ ಕರೆದರು. ಅದನ್ನೇ ಕಾಯುತ್ತಿದ್ದ ರಾಮಮಯ ಪಿಕಾಸಿ ಕೆಳಗಿಟ್ಟು, ಹೊರಡಲನುವಾದ. ಅಷ್ಟರಲ್ಲಿ ಜ್ಞಾನ್ ಹೇಳಿದರು, "ಕೆಲಸ ಬಹಳಷ್ಟು ಮುಗಿದಿದೆ. ಇಬ್ಬರೂ ಒಟ್ಟಿಗೆ ಹೋಗೋಣ" ಎಂದು. ಆದರೆ ರಾಮಮಯ ಅವರ ಮಾತು ಕೇಳಲಿಲ್ಲ. ಶ್ರೀಮಾತೆಯವರು ಸಂತೋಷದಿಂದ ಹೇಳಿದರು: "ಜ್ಞಾನ್ ಪಶ್ಚಿಮ ಬಂಗಾಳದವನು; ಬಹಳ ಗಡಸು. ಅವನು ಯಾರ ಮಾತನ್ನೂ ಕೇಳುವುದಿಲ್ಲ. ನೀನು ಕೈ ಕಾಲು ಮುಖ ತೊಳೆದುಕೊಂಡು ಊಟಕ್ಕೆ ಕುಳಿತುಕೊ." ಅವನು ಅದೇರೀತಿ ಮಾಡಿ ಊಟಕ್ಕೆ ಕುಳಿತುಕೊಳ್ಳುವುದರಲ್ಲಿಯೇ ನಳಿನಿ ಪ್ರತ್ಯಕ್ಷಳಾದಳು. ಹಾಗೇ ಊಟ ಮಾಡುವುದುಂಟೇ? ಸರಿ, ಶುರುವಾಯಿತು ಅವಳ ಉಪದೇಶ: "ಏನಸಹ್ಯ! ಕೆರೆಯ ಆ ಭಾಗ ಹೊಲಸಿನಿಂದ ಕೂಡಿದೆ. ನೀನೀಗ ಸ್ನಾನ ಮಾಡಿ ಬಾ, ಇಲ್ಲದಿದ್ದರೆ ಅದ್ಹೇಗೆ ನಿಶ್ಚಿಂತೆಯಿಂದ ಊಟ ಮಾಡುವೆ?" ಇದಕ್ಕೆ ಶ್ರೀಮಾತೆಯವರು ಅವಳಿಗೆ ಗದರಿಸಿದರು: "ಸುಮ್ಮನೆ ಇರು! ಇವರೆಲ್ಲ ಪವಿತ್ರವಾದ ಹುಡುಗರು. ಯಾವುದೂ ಅವರನ್ನು ಅಪವಿತ್ರಗೊಳಿಸುವುದಿಲ್ಲ. ನಿನ್ನ ಮನಸ್ಸೇ ಅಪವಿತ್ರವಾಗಿದೆ. ಆದ್ದರಿಂದಲೇ ಎಲ್ಲದರಲ್ಲಿಯೂ 'ಮಡಿ, ಮಡಿ' ಎಂದು ಹೌಹಾರುವೆ." ಈ ರೀತಿ ಅಭಯಪ್ರದಾನ ಸಿಕ್ಕಿದ್ದರಿಂದ ರಾಮಮಯ ನಿರಾಳವಾಗಿ ಊಟ ಮಾಡಲಾರಂಭಿಸಿದ. ಶ್ರೀಮಾತೆಯವರಿಗೂ ಸಂತೋಷವಾಯಿತು. (*Vedanta Kesari*, ಚೆನ್ನೈ, ಫೆಬ್ರುವರಿ, ೨೦೦೦, ಪುಟ. ೪೯)

ಇಲ್ಲಿ ನಾವು ಗಮನಿಸಬೇಕಾದ ಸಂಗತಿ ಎಂದರೆ, ನಮ್ಮ ಧರ್ಮಶಾಸ್ತ್ರಗಳೇನೊ ಬಾಹ್ಯಶುದ್ಧಿ ಆಚರಣೆಯನ್ನು ಪ್ರತಿಪಾದಿಸುತ್ತವೆ. ಆದರೆ ಸಾಮಾನ್ಯರಾದ ನಾವು— ನಳಿನಿಯಂತಹವರು—ಆ ಕಟ್ಟುಪಾಡುಗಳನ್ನು ಯಾರೆಂದರೆ ಅವರ ಮೇಲೆ, (ದೇಶ, ಕಾಲ, ಪಾತ್ರಗಳನ್ನು ಗಣನೆಗೆ ತಾರದೆ) ನಿರ್ದಯದಿಂದ ಹೇರುತ್ತೇವೆ. ಶ್ರೀಮಾತೆಯವರಾದರೋ ಅವುಗಳ ಆಚರಣೆಯಲ್ಲಿ, ಸಮಯ ಸಂದರ್ಭಕ್ಕೆ ಉಚಿತವಾಗಿ ಕೆಲವರಿಗೆ ವಿನಾಯತಿ ನೀಡುತ್ತಿದ್ದರು!

❊ ❊ ❊ ❊

ಆದರೆ ಇದೇ ನಳಿನಿ, ಒಮ್ಮೆ ಸಾಮಾನ್ಯ ವಿಷಯಕ್ಕೆ ತಳಮಳಗೊಂಡು ಚಡಪಡಿಸುತ್ತಿದ್ದ ಶ್ರೀಮಾತೆಯವರನ್ನು, ತನ್ನ ಬುದ್ಧಿಚಾತುರ್ಯದಿಂದ ಸಮಾಧಾನ ಪಡಿಸಿದಳೆಂಬ ಸಂಗತಿ ಆಶ್ಚರ್ಯವೆನಿಸಿದರೂ ನಿಜವಾಗಿದೆ! ಆ ಸಂದರ್ಭ ಹೀಗಿದೆ:

ಕೆಲವು ಸಾರಿ, ಸಣ್ಣ ಸಣ್ಣ ವಿಷಯಗಳಲ್ಲಿಯೂ ಶ್ರೀಮಾತೆಯವರು ಚಿಕ್ಕ ಮಗುವಿನಂತೆ ವರ್ತಿಸುತ್ತಿದ್ದುದನ್ನು ಕಂಡು ನಮಗೆ ಆಶ್ಚರ್ಯವಾಗುತ್ತಿತ್ತು. ಒಮ್ಮೆ ಭಕ್ತನೊಬ್ಬ ಹಾಲಿನಿಂದ ತುಂಬಿದ ಗಡಿಗೆಯೊಂದನ್ನು ತಂದ; ಆದರೆ ಅವನ ಮುಖ ಕಳಾಹೀನವಾಗಿತ್ತು. ಗಡಿಗೆಯನ್ನು ಶ್ರೀಮಾತೆಯವರ ಪದತಲದಲ್ಲಿಟ್ಟು, ಪ್ರಣಾಮ ಮಾಡಿ, ನಡೆದ ಸಂಗತಿಯನ್ನು ವಿವರಿಸಿದ:

ಅಪ್ಪಟವಾದ ಹಾಲನ್ನು ಪಡೆಯಲು ಅವನ ಸ್ನೇಹಿತನೊಬ್ಬ ಮಾರುಕಟ್ಟೆಯ ದರಕ್ಕಿಂತಲೂ ಜಾಸ್ತಿ ದುಡ್ಡು ಕೊಟ್ಟು ಖರೀದಿಸಿದ್ದ. ಅದನ್ನೇ ಈಗ ಶ್ರೀಮಾತೆಯವರ ಪದತಲದಲ್ಲಿರಿಸಿದ್ದು. ಆದರೆ ಆ ಭಕ್ತ ಹಾಲನ್ನು ತರುತ್ತಿದ್ದಾಗ ಅದರಲ್ಲಿ ಸಣ್ಣ ಮೀನೊಂದು ತೇಲುತ್ತಿದ್ದುದು ಕಂಡುಬಂತು. ಅದನ್ನು ನೋಡಿದ ಕೂಡಲೇ ಆತ ದಿಗ್ಭ್ರಾಂತನಾಗಿ ಎಲ್ಲ ಹಾಲನ್ನೂ ಅಲ್ಲಿಯೇ ಚೆಲ್ಲಿಬಿಡಲೇ ಎಂದುಕೊಂಡ. ಆದರೆ ಮರುಕ್ಷಣವೇ ಅದನ್ನು ಶ್ರೀಮಾತೆಯವರಲ್ಲಿಗೆ ತೆಗೆದುಕೊಂಡು ಹೋಗುವುದೆಂದೂ ನಂತರ ಅವರು ಹೇಳಿದಂತೆ ಮಾಡುವುದೆಂದೂ ತೀರ್ಮಾನಿಸಿದ. ತನ್ನ ಸ್ನೇಹಿತ ಆ ಅಪ್ಪಟ ಹಾಲಿನಿಂದ ಪಾಯಸ ಮಾಡಿಸಿ, ಶ್ರೀರಾಮಕೃಷ್ಣರಿಗೆ ಅರ್ಪಿಸಬೇಕೆಂದೂ ನಂತರ ಶ್ರೀಮಾತೆಯವರಿಗೆ ರುಚಿನೋಡಲು ಕೊಡಬೇಕೆಂದೂ ಭಾವಿಸಿದ್ದ. ಆದರೆ ಎಂಥ ದುರದೃಷ್ಟ! ಸ್ನೇಹಿತನ ಸದ್ಬಯಕೆ ಪೂರ್ಣವಾಗುವಂತಿಲ್ಲವಾಗಿದೆ. ಇದನ್ನು ಕೇಳಿದ ನಂತರ ಶ್ರೀಮಾತೆಯವರು ತುಂಬಾ ನೊಂದುಕೊಂಡು ನುಡಿದರು: "ಇಲ್ಲ, ಮಗು, ಹಾಲನ್ನೇಕೆ ಬಿಸಾಡಬೇಕು? ಇಲ್ಲಿ ತುಂಬ ಮಕ್ಕಳಿದ್ದಾರೆ. ಅವರು ಅದನ್ನು ಉಪಯೋಗಿಸಬಹುದು."

ಆದರೂ "ಅಷ್ಟು ದೂರದಿಂದ ಭಕ್ತ ತಂದಿದ್ದ ಹಾಲನ್ನು ಶ್ರೀರಾಮಕೃಷ್ಣರಿಗೆ ಅರ್ಪಿಸಿದಂತಾಗಲಿಲ್ಲವಲ್ಲ" ಎಂಬ ಚಿಂತೆ ಅವರನ್ನು ಬಿಡಲಿಲ್ಲ. ಆದ್ದರಿಂದ ಮಗುವಿನಂತೆ ಮನೆಯಲ್ಲಿ ಎಲ್ಲರನ್ನೂ—ಅಡಿಗೆಯವಳಿಂದ ಹಿಡಿದು ಕೆಲಸಗಿತ್ತಿಯವರೆಗೆ—ಕೇಳಿದರು, "ಏನು, ಈ ಹಾಲನ್ನು ರಾಮಕೃಷ್ಣರಿಗೆ ಅರ್ಪಿಸಲಾಗುವುದಿಲ್ಲವೇ?" ಎಂದು. ಇಂಥಾ ವಿಷಯಗಳಲ್ಲಿ ಪೂರ್ವಾಪರ ವಿವೇಚನೆ ಇಲ್ಲದೆ, ಸುಲಭವಾಗಿ ನಕಾರಾತ್ಮಕ ಅಭಿಪ್ರಾಯ ಕೊಡುವುದರಲ್ಲಿ ಎಲ್ಲರೂ ನಿಸ್ಸೀಮರೆ! ಅಂತೆಯೆ ಅವರು ಹೇಳಿದರು: "ಅದು ಹೇಗೆ ಆಗುತ್ತದೆ? ಹಾಲಿನಲ್ಲಿ ಮೀನು ಕಾಣಿಸಿದೆ; ಅದನ್ನು ನೈವೇದ್ಯಕ್ಕೆ ಉಪಯೋಗಿಸುವಂತಿಲ್ಲ." ಈ ಮಾತು ಕೇಳಿ ಶ್ರೀಮಾತೆಯವರು ಇನ್ನೂ ನಿರಾಶೆಹೊಂದಿ ಕುಳಿತರು.

ಅಷ್ಟರಲ್ಲಿ ನಳಿನಿ ಅಲ್ಲಿಗೆ ಬಂದಳು! ಶ್ರೀಮಾತೆಯವರು ಸಂದಿಗ್ಧ ಪರಿಸ್ಥಿತಿಯನ್ನು ಅವಳಿಗೆ ವಿವರಿಸಿದರು. ಎಲ್ಲವನ್ನೂ ಕೇಳಿದ ನಂತರ ನಳಿನಿ—ಒಳ್ಳೆ ಅನುಭವಿಯಾದ ಗೃಹಿಣಿಯಂತೆ—ತನ್ನ ತೀರ್ಪನ್ನು ಇತ್ತಳು: "ಅದರಿಂದೇನಾಯಿತು, ಅತ್ತಿಗೆ? ಹಳ್ಳಿಯವನ ಮನೆಯ ಹಾಲಿನಲ್ಲಿ ಸಣ್ಣ ಮೀನೊಂದು ಬಿತ್ತು. (ಆ ಕಾಲದ ಬಂಗಾಳದಲ್ಲಿ, ಸಾಮಾನ್ಯವಾಗಿ ಹಳ್ಳಿ ಪ್ರದೇಶದಲ್ಲಿ, ನದಿ ಅಥವಾ ಕೆರೆಯ ನೀರನ್ನು ನೇರವಾಗಿ ಕುಡಿಯುವುದಕ್ಕೆ, ಅಡುಗೆಗೆ, ಕಾಲು ತೊಳೆಯುವುದಕ್ಕೆ ಇತ್ಯಾದಿ ಕೆಲಸಗಳಿಗೆ ಉಪಯೋಗಿಸುತ್ತಿದ್ದುದರಿಂದ, ಹಾಲಿನಲ್ಲಿ ಮೀನು ಕಂಡುಬರುವುದು ವಿಶೇಷವೇನೂ ಆಗಿರಲಿಲ್ಲ.) ಅದನ್ನೀಗ ತೆಗೆಯಲಾಗಿದೆ. ಅದರಿಂದ ಆ ಹಾಲು ಹೇಗೆ ನೈವೇದ್ಯಕ್ಕೆ ಅನರ್ಹವಾಗುತ್ತದೆ? ಕಲ್ಕತ್ತಾದಂತಹ ದೊಡ್ಡ ನಗರದಲ್ಲಿ, ಗವಳಿಗರು ತಮ್ಮ ಹಾಲಿಗೆ ಏನೇನನ್ನು ಬೆರೆಸುವುದಿಲ್ಲ? ಅದನ್ನೆಲ್ಲ ಯಾರು ಗಣನೆಗೆ ತೆಗೆದುಕೊಳ್ಳುತ್ತಾರೆ? ಅದೇ ಹಾಲನ್ನು ಸಿಹಿತಿಂಡಿ ಮಾಡುವಾಗ ಉಪಯೋಗಿಸುತ್ತಾರೆ. ಅದರಿಂದಲೇ ಪಾಯಸ, ಸಿಹಿತಿಂಡಿ ಇತ್ಯಾದಿಗಳನ್ನು ಮಾಡಿ ನಿಶ್ಚಿಂತೆಯಿಂದ ದೇವರಿಗೆ ನೈವೇದ್ಯ ಮಾಡುತ್ತಾರೆ." ಈ ಮಾತು ಕೇಳಿದಕೂಡಲೇ ಶ್ರೀಮಾತೆಯವರ ಮುಖ ಅರಳಿತು. ಅವರು ಹೇಳಿದರು: "ಹೌದು, ನಳಿನಿ ಸರಿಯಾಗಿಯೇ ಹೇಳಿದ್ದಾಳೆ. ಕಲ್ಕತ್ತಾದಲ್ಲಿ ಹಾಲು ಹೇಗಿದೆಯೆಂದು ಯಾರು ಗಮನ ಕೊಡುತ್ತಾರೆ? ಅದಕ್ಕೆ ಏನೇನೆಲ್ಲ ಬೆರೆಸುವುದಿಲ್ಲ! ಅಲ್ಲಿನ ಹಾಲನ್ನು ದೇವರಿಗೆ ನೈವೇದ್ಯ ಮಾಡಬಹುದಾದರೆ, ಇಲ್ಲಿನದನ್ನೇಕೆ ಅರ್ಪಿಸಬಾರದು? ಹಾಗೆ ನೋಡಿದರೆ, ಇಲ್ಲಿನ ಹಾಲು ಹೆಚ್ಚು ಅಪ್ಪಟವಾದದ್ದು, ಹಾಗೂ ಕಲ್ಕತ್ತಾದ ಹಾಲಿಗಿಂತಲೂ ಉತ್ತಮವಾದುದು!" ಈ ರೀತಿ ನಳಿನಿಯ ಪ್ರೌಢ ಅಭಿಪ್ರಾಯವನ್ನು ಪೂರ್ಣವಾಗಿ ಒಪ್ಪಿಕೊಂಡು, ಶ್ರೀಮಾತೆಯವರು ಸಂತೋಷದಿಂದ ಹಾಗೂ ಸಂತೃಪ್ತಿಯಿಂದ, ಅದೇ ಹಾಲಿನಿಂದ ಪಾಯಸ ಮಾಡಿಸಿ, ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡಿ, ಎಲ್ಲರಿಗೂ ಪಾಯಸ ಪ್ರಸಾದವನ್ನು ತಾವೇ ಆನಂದದಿಂದ ಬಡಿಸಿದರು.

((*The Mother as I Saw Her*, ಸ್ವಾಮಿ ಶಾರದೇಶಾನಂದ, ರಾಮಕೃಷ್ಣ ಮಠ, ಚೆನ್ನೈ, ೧೯೮೭, ಎರಡನೆ ಮುದ್ರಣ, ಪುಟ. ೧೬೬-೧೬೭)

◆

ಅವರಲ್ಲಿ ಕಾಣುತ್ತಿದ್ದ ಜ್ಞಾನ ಮತ್ತು ಮಾಧುರ್ಯ ಅತ್ಯಂತ ಸರಳ ಸ್ತ್ರೀಯರಿಗೆ ಮಾತ್ರ ದಕ್ಕುವಂತಹುದು. ಆದರೂ ನನ್ನ ದೃಷ್ಟಿಯಲ್ಲಿ ಅವರ ಸೌಜನ್ಯದಲ್ಲಿ ಕಂಡುಬರುತ್ತಿದ್ದ ಅಪೂರ್ವ ಗಾಂಭೀರ್ಯ ಮತ್ತು ತೆರೆದ ಮನಸ್ಸಿನಿಂದ ಇತರರ ಭಾವವನ್ನು ಗ್ರಹಿಸುವ ಸಾಮರ್ಥ್ಯ ಅವರ ಸಾಧುತ್ವದಷ್ಟೆ ಅಮೋಘವಾದುವು. ಅವರಿಗೆ ಎಷ್ಟೆ ಕಠಿನವಾದ ಅಥವಾ ನೂತನವಾದ ಪ್ರಶ್ನೆಯನ್ನು ಹಾಕಿದರೂ ಅವರು ತಮ್ಮ ಉದಾರವಾದ ಯುಕ್ತಿಯುಕ್ತವಾದ ನಿರ್ಣಯವನ್ನು ನೀಡಲು ಎಂದೂ ಮೀನಾಮೇಷ ಮಾಡಿದವರಲ್ಲ. ಅವರಿಗರಿಯದ ಯಾವುದೋ ಸಮಾಜವಿಪ್ಲವದಿಂದ ಸಂಭ್ರಾಂತನಾದ ಅಥವಾ ಪೀಡಿತನಾದ ವ್ಯಕ್ತಿ ಅವರೆಡೆಗೆ ಬಂದರೆ ತಮ್ಮ ನಿರ್ದಿಷ್ಟ ಅಂತರ್ದೃಷ್ಟಿಯಿಂದ ವಿಷಯದ ಅಂತರಾಳವನ್ನು ಹೊಕ್ಕು ಆ ಸಮಸ್ಯೆಯ ಬಗ್ಗೆ ಅವನ ದೃಷ್ಟಿಕೋನವನ್ನೇ ಬದಲಾಯಿಸುತ್ತಿದ್ದರು.

—ಸೋದರಿ ನಿವೇದಿತಾ